# ತಲೆಗೆ ಬಣ್ಣ ಬಿಟ್ಟಿದ್ದು ಮುಖಕ್ಕೆ ಬಣ್ಣ ಕೊಟ್ಟಿತು



ಪ್ರೀತಂ ಉದಯದ 'ಚಿಕ್ಕೆಜಮಾನಿ'ಯ ಪರಶುರಾಮ್

■ ರಾಘವೇಂದ್ರ ಕೆ.

◆ 'ಚಿಕ್ಕೆಜಮಾನಿ'ಯಲ್ಲಿ ವಿರೋಧದ ನಡುವೆ ಮಗನ ಮದುವೆ ಆಗಿದೆ. ಇದಕ್ಕೆ ಏನಂತೀರಿ?

ಈ ಪಾತ್ರಕ್ಕೆ ರೀಪ್ಲೇಸ್ ಎರಡು ತಿಂಗಳ ಹಿಂದೆ ಆಯಿತು. ನನ್ನ ಮೂಲ ಹೆಸರು ಇಲ್ಲಿ ಮಗನ ಹೆಸರಾಗಿದೆ. ವೀಕ್ಷಕರ ವಲಯದಲ್ಲಿ ಮದುವೆ ಆಗಿದೆ. ವಾಸ್ತವದಲ್ಲಿ ಅದು ಮದುವೆ ಅಲ್ಲ. ಕುಟುಂಬವನ್ನು ರಕ್ಷಿಸುವ ನಿಟ್ಟಿನಲ್ಲಿ ಈ ಪಾತ್ರ ಮಹತ್ವದ ಕಾರ್ಯನಿರ್ವಹಿಸುತ್ತದೆ. ಈ ರೀತಿಯ ಪಾತ್ರವನ್ನು ಮೊದಲು ಮಾಡಿರಲಿಲ್ಲ. ಇದು ಸಾಂಪ್ರದಾಯಿಕವಾಗಿದ್ದು, ಗಂಭೀರ ನಡವಳಿಕೆಯಿಂದ ಕೂಡಿದೆ. ವೀಕ್ಷಕರಿಂದ ಮೆಚ್ಚುಗೆಯೂ ಸಿಕ್ಕಿದೆ.

◆ ಬಣ್ಣಕ್ಕೆ ಮಾರುಹೋಗಲು ಸಿಕ್ಕ ಅವಕಾಶ ಯಾವುದು?

ಮೂಲತಃ ಮಂಗಳೂರಿನವನು. ಆಕಸ್ಮಿಕವಾಗಿ ನಟನಾಗಬೇಕಾಯಿತು. ಅದೂ ಜನ ಕೆಲಸ ಕಳೆದುಕೊಳ್ಳುತ್ತಿದ್ದ ಕೋವಿಡ್ ಸಮಯದಲ್ಲಿ ಎನ್ನುವುದು ವಿಚಿತ್ರ. ತಲೆಗೂದಲಿಗೆ ಆ ಸಮಯದಲ್ಲಿ ಬಣ್ಣ ಹಾಕುವುದನ್ನು ಬಿಟ್ಟಿದ್ದರಿಂದ ನಟನಾಗುವ ಅವಕಾಶ ಸಿಕ್ಕಿತು. ನನ್ನಿಂದ ಅಭಿನಯವನ್ನು ತೆಗೆದವರು ರಘುಚರಣ್. ಇನ್‌ಸ್ಟಾಗ್ರಾಂನಲ್ಲಿ ಹಾಕಿದ ಫೋಟೊ ನೋಡಿ ಆಡಿಷನ್ನಿಗೆ ಕರೆದರು. ಮೊದಲು 'ಕನ್ಯಾಕುಮಾರಿ'ಗೆ ಬಣ್ಣ ಹಚ್ಚಿದೆ. ಮೊದಲು ಟ್ರಾವೆಲ್ಸ್ ಸಂಸ್ಥೆಯನ್ನು ನಡೆಸುತ್ತಿದ್ದೆ. ಜೊತೆಗೆ ಇವೆಂಟ್ ಮ್ಯಾನೇಜ್‌ಮೆಂಟ್ ಕೂಡ ಮಾಡುತ್ತಿದ್ದೆ. ವಿದೇಶ ಪ್ರವಾಸಿಗಳೇ ಹೆಚ್ಚಿನ ಗ್ರಾಹಕರಾಗಿದ್ದರು. ಕೋವಿಡ್ ಸಮಯದಲ್ಲಿ ಉದ್ಯಮಕ್ಕೆ ಬಿದ್ದ ಏಟಿನಿಂದ ಸುಧಾರಿಸಿಕೊಳ್ಳಲು ಎರಡು ವರ್ಷ ಬೇಕಿತ್ತು. ಅದೇ ಸಮಯದಲ್ಲಿ ನಟನೆಗೆ ಅವಕಾಶ ಬಂತು. ಕೆಲಸವೂ ಅನಿವಾರ್ಯವಾಗಿತ್ತು. ಈಗ ಎರಡನ್ನೂ ಮಾಡುತ್ತಿದ್ದೇನೆ.

◆ ಸಿನಿಮಾ ನಿರ್ಮಾಣ ಮಾಡಿದ್ದು ಹೇಗೆ?

'ಇನ್‌ಬಾಕ್ಸ್ ಕ್ರಿಯೆಟೀವ್ಸ್' ನಿರ್ಮಾಣ ಸಂಸ್ಥೆಯನ್ನು ಕೂಡ ಮಾಡುತ್ತಿದ್ದೇನೆ. ತುಳುವಿನಲ್ಲಿ ಎರಡು ಸಿನಿಮಾ ಮಾಡಿದ್ದೇನೆ. ವೆಬ್ ಸೀರೀಸ್ ಕೂಡ ಮಾಡಿದ್ದೇನೆ. ಅವುಗಳನ್ನು ಒಟಿಟಿ ವೇದಿಕೆಗಾಗಿ ಮಾಡಿದ್ದೆ. ಸದ್ಯ ನಿರ್ಮಾಣ ಮಾಡುತ್ತಿಲ್ಲ. ಮುಂದಿನ ದಿನಗಳಲ್ಲಿ ಅದನ್ನು ಪೂರ್ಣಪ್ರಮಾಣದಲ್ಲಿ ಮಾಡುವ ಯೋಚನೆ ಇದೆ. ಜೀವನ ಭದ್ರತೆಗೆ ಬೇರೆ ಆದಾಯ ಮೂಲವನ್ನು ನಿರ್ಮಿಸಿಕೊಂಡ ನಂತರ ನಿರ್ಮಾಣಕ್ಕೆ ಇಳಿಯುವೆ. ಈಗ ಆ್ಯಪ್ ಆಧಾರಿತ ಸೀರೀಸ್ ಕೂಡ, ಮಾಡಬಹುದು. ಕನ್ನಡದಲ್ಲಿ ಹೊಸ ಅವಕಾಶ ತೆರೆದುಕೊಂಡಿದೆ. ಪ್ರತಿಭಾವಂತರು ಅಲ್ಲೂ ತೊಡಗಬಹುದು.

◆ ಆಸಕ್ತರು ಹೇಗೆ ವೆಬ್ ಸೀರಿಯಲ್‌ಗೆ ಕಥೆಯನ್ನು ಕೊಡಬೇಕು?

ಸ್ವತಃ ನಾವೇ ನಿರ್ಮಿಸಿ ಪ್ರಸಾರದ ಹೊಣೆಯನ್ನು ತೆಗೆದುಕೊಳ್ಳುತ್ತೇವೆ ಎನ್ನುವುದು ಕಷ್ಟದ ಕೆಲಸ. ವೆಬ್‌ಸೀರೀಸ್ ಪ್ರಸಾರ ಮಾಡುವ ಸಂಸ್ಥೆಗಳು ಇವೆ. ಅಂತೆಯೇ ಆ್ಯಪ್ ಕೂಡ ಇವೆ. ಅದಕ್ಕೆ ಆ ಸಂಸ್ಥೆಯೇ ಬಜೆಟ್ ನೀಡುತ್ತದೆ. ನಾವು 'ಟಾಕೀಸ್ ಆ್ಯಪ್' ಅನ್ನುವ ಸಂಸ್ಥೆಗೆ ಮಾಡಿದ್ದೇವೆ. ಕನ್ನಡದಲ್ಲಿ ಈ ವೇದಿಕೆ ಹೊಸದಾಗಿ ಪರಿಚಯ ಆಗುತ್ತಿದೆ. ಒಟಿಟಿಯವರು ನಿಗದಿಪಡಿಸಿದ ಬಜೆಟ್ ಒಳಗೆ ನಾವು ಸಿನಿಮಾ ಮಾಡಿಕೊಡಬೇಕು. ಆ್ಯಪ್ ಆಧಾರಿತ ಧಾರಾವಾಹಿಯನ್ನು ಮೈಕ್ರೊ ಸೀರೀಸ್ ಅಂತಾರೆ. ಆರಂಭದಲ್ಲಿ ಐದಾರು ಕಂತಿನ ಕಥೆಯನ್ನು ಮಾಡಿದ್ದೆವು. ಚಿಕ್ಕ ಚಿಕ್ಕ ಕಥೆಗಳನ್ನು ಅಲ್ಲಿ ನಿರೂಪಿಸಬಹುದು. ಇದು ಹೊಸ ಬೆಳವಣಿಗೆ. ಹೊಸ ಕಥೆಗಾರರು, ನಿರ್ಮಾಪಕರಿಗೆ ಮತ್ತೊಂದು ವೇದಿಕೆ ಸಿಕ್ಕಂತೆ ಆಗಿದೆ. ಇದನ್ನು ಮೊಬೈಲ್‌ನಲ್ಲಿಯೇ ನೋಡಬಹುದು. ವೆಬ್‌ಸೀರೀಸ್ ಮತ್ತು ಸಿನಿಮಾಗಳನ್ನು ದೊಡ್ಡ ದೊಡ್ಡ ಸಂಸ್ಥೆಗಳು ಮಾಡುತ್ತಿವೆ. ಈ ಎರಡು ಕ್ಷೇತ್ರದಲ್ಲಿ ಕೆಲಸ ಮಾಡುವ ಅವಕಾಶ ಇದೆ.

◆ ನಿರ್ದೇಶನದ ಕೌಶಲ ಕಲಿತಿದ್ದು ಹೇಗೆ?

ಆಸಕ್ತಿಯೇ ಮುಖ್ಯ. ಕ್ರಿಯಾಶೀಲವಾಗಿ ಯೋಚನೆ ಮಾಡುವುದೇ ಅದಕ್ಕೆ ಇರುವ ದಾರಿ. ಟ್ರಾವೆಲ್ಸ್ ಜೊತೆ ಇವೆಂಟ್ ಮಾಡುತ್ತಿದ್ದೆ. ಗ್ರಾಹಕರಿಗೆ ಮನೋರಂಜನೆಯ ಕಾರ್ಯಕ್ರಮ ರೂಪಿಸುವಾಗ ನಿರ್ಮಾಣ ಮಾಡುವ ಅಪೇಕ್ಷೆ ಹುಟ್ಟಿತು. ತುಳು ಸಿನಿಮಾವೊಂದನ್ನು ಸಣ್ಣ ಬಜೆಟ್, ಅಂದರೆ 30 ಲಕ್ಷದಲ್ಲಿ ನಿರ್ಮಿಸಿದೆ. ಅದರಿಂದ 20 ಲಕ್ಷ ಸಂಗ್ರಹ ಆಯಿತು. ಆಗ ಹೂಡಿಕೆ ಕಡಿಮೆ ಮಾಡಿ ನಿರ್ಮಾಣ ಮಾಡಿದರೆ ಒಳ್ಳೆಯದಾಗಬಹುದು ಎಂದು ಆ ನಿಟ್ಟಿನಲ್ಲಿಯೂ ಕೆಲಸ ಮಾಡಿದೆ. ಆಗ ಪ್ರೊಡಕ್ಷನ್ ತಂತ್ರಗಾರಿಕೆಯನ್ನು ಕಲಿಯಲು ಸಾಧ್ಯ ಆಯಿತು. ಎಲ್ಲ ಕೆಲಸವನ್ನು ನಮ್ಮ ತಂಡವೇ ಮಾಡಿದ್ದರಿಂದ ಎರಡನೇ ಸಿನಿಮಾವನ್ನು 22 ಲಕ್ಷದಲ್ಲಿ ಪೂರ್ಣಮಾಡಿದೆವು. ಈಗ ನಟನೆಗೆ ಹೋದರೂ ತಾಂತ್ರಿಕವಾಗಿ ಕಲಿಯಲು ಏನು ಇದೆ ಎನ್ನುವುದನ್ನು ನೋಡುತ್ತೇನೆ.

■